## 10

# ಲೋಕವು ದ್ವೇಷಿಸುತ್ತದೆ

## (ಯೋಹಾನ 15)

*"ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ದ್ವೇಷ ಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. ದಣಿಗಿಂತ ಆಳು ದೊಡ್ಡವನಲ್ಲವೆಂಬದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಕೈಕೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು. ಆದರೆ ಅವರು ನನ್ನನ್ನು ಕಳುಹಿಸಿಕೊಟ್ಟಾತನನ್ನು ತಿಳಿಯದವರಾದದರಿಂದ ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತ ನಿಮಗೆ ಮಾಡುವರು. ನಾನು ಬಂದು ಅವರ ಕೂಡ ಮಾತಾಡದಿದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಅವರು ಮಾಡಿದ ಪಾಪಕ್ಕಾಗಿ ಅವರಿಗೆ ಈಗ ನೆವವಿಲ್ಲ. ನನ್ನ ಮೇಲೆ ದ್ವೇಷಮಾಡುವವನು ನನ್ನ ತಂದೆಯ ಮೇಲೆಯೂ ದ್ವೇಷಮಾಡುವವನಾಗಿದ್ದಾನೆ. ಮತ್ತಾರೂ ನಡಿಸದ ಕ್ರಿಯೆಗಳನ್ನು ನಾನು ಅವರಲ್ಲಿ ನಡಿಸದೆ ಇದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಈಗ ಅವರು ನೋಡಿದ್ದಾರೆ, ಆದರೂ ನನ್ನ ಮೇಲೆಯೂ ನನ್ನ ತಂದೆಯ ಮೇಲೆಯೂ ದ್ವೇಷ ಮಾಡಿದ್ದಾರೆ. ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿಸಿದರು ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು ನೆರವೇರುವಂತೆ ಹೀಗಾಯಿತು" (ವಚನಗಳು 18-25).*

ಯೇಸುವಿನ ಜೀವಿತದ ಕುರಿತಾದ ಒಂದು ಆಶ್ಚರ್ಯಕರವಾದ ಪ್ರಶ್ನೆಯು ಇಲ್ಲಿರುತ್ತದೆ: "ಲೋಕವು ಆತನನ್ನು ಏಕೆ ಶಿಲುಬೆಗೆ ಹಾಕಿತು?" ಆತನು ಲೋಕಕ್ಕೆ ನೀಡಿದ ರಕ್ಷಣೆಯನ್ನು ತೆರೆದ ಹೃದಯದಿಂದ, ಆತ್ಮೀಕ ಸಂತೋಷದಿಂದ, ನಿತ್ಯವಾದ ಕೃತಜ್ಞತೆಯಿಂದ ಏಕೆ ಸ್ವೀಕರಿಸಲಿಲ್ಲ? ಆತನು ಪರಿಪೂರ್ಣವಾದ ಒಳ್ಳೇ ತನವನ್ನು ತೋರಿದಾಗ್ಯೂ, ಆತನು ಸತ್ಯದ ಮಾರ್ಗವನ್ನು ಜನರಿಗೆ ತೋರಿದರೂ, ಪ್ರಪಂಚವು ಅದನ್ನು ಸಹಿಸಲಿಲ್ಲ. ಪ್ರಪಂಚವು, ಆತನು ಯಾರೂ, ಆತನು ಲೋಕಕ್ಕೆ ಏನನ್ನು ನೀಡಿದನು ಎಂದು ತಿಳಿದಾಗ್ಯೂ ಆತನನ್ನು ನಾಶಮಾಡಲು ಯತ್ನಿಸಿದರು. ಲೋಕಕ್ಕೆ ಬಂದಿದ್ದ ನಿಜವಾದ ಬೆಳಕನ್ನು ನಂದಿಸಲು ಪ್ರಯತ್ನಿಸಿದರು ಏಕೆ ಹೀಗಾಯಿತು? ಪ್ರೀತಿಯ ಹಾಗೂ ನೀತಿಯ ರಕ್ಷಕನನ್ನು ಏಕೆ ತಿರಸ್ಕರಿಸಿದರು? ಲೋಕವು ಸತ್ಯವನ್ನು ಸಹಿಸಲಾರದ ನಿಮಿತ್ತ ಆತನನ್ನು ದ್ವೇಷಿಸಿತು.

ಯೇಸುವಿನ ಮರಣದ ಮೊದಲು, ಈ ವಿಷಯದ ಕುರಿತಾಗಿ ಮೇಲುಪ್ಪರಿಗೆಯಲ್ಲಿ ಚರ್ಚಿಸಿದರು. ಕರ್ತನು ತನ್ನ ಅಪೊಸ್ತಲರನ್ನು ಸೈತಾನನ ನಿಯಂತ್ರಣದಲ್ಲಿದ್ದ ಲೋಕವು ಆತನನ್ನು ಶಿಲುಬೆಗೆ ಹಾಕುವ ಸಂದರ್ಭಕ್ಕಾಗಿ ಸಿದ್ಧಮಾಡುತ್ತಿದ್ದನು. ಆತನು ಲೋಕದಲ್ಲಿ ಜೀವಿಸಿದಂತೆ, ಅಪೊಸ್ತಲರು ಆತನ ಕೆಲಸವನ್ನು ಮುಂದುವರೆಸಿ, ಆತನ ಹಾಗೆ ಜೀವಿಸಬೇಕಿತ್ತು, ಮತ್ತು ಇದಕ್ಕಾಗಿ ಅವರು ಸಿದ್ಧಗೊಳ್ಳಬೇಕಿತ್ತು. ಯೋಹಾನ 15:18-25ರಲ್ಲಿ, ಮುಂದೆ ಬರಲಿದ್ದ

ಕಾರ್ಯಕ್ಕಾಗಿ ನಮ್ಮ ಕರ್ತನು ಅವರನ್ನು ಸಿದ್ಧಪಡಿಸುತ್ತಿದ್ದನು.

ಯೋಹಾನ 15ರಲ್ಲಿ, ದಾಖಲಾಗಿರುವ ಎರಡು ಮುಖ್ಯ ಅಂಶಗಳನ್ನು ಯೇಸು ಚರ್ಚಿಸಿದನು. ದ್ರಾಕ್ಷೇ ಬಳ್ಳಿ ಹಾಗೂ ಕೊಂಬೆಯ ನಿದರ್ಶನವನ್ನು ನೀಡಿ ತನ್ನಲ್ಲಿರುವ ಜೀವಿತದ ಕುರಿತು ತಿಳಿಸಿದನು. ಕೊಂಬೆಯು ಬಳ್ಳಿಯಿಂದ ಜೀವವನ್ನು ಪಡೆಯುವಂತೆ, ಅವರುಗಳು ಆತನಿಂದ ಜೀವವನ್ನು ಪಡೆಯಬೇಕಿತ್ತು (ವಚನಗಳು 1-8). ಆತನು ಈ ಚಿತ್ರಣದಿಂದ, ಪರಸ್ಪರ ಪ್ರೀತಿಯ ವಿಚಾರಕ್ಕೆ ಮುಂದಾದನು, ಪ್ರೀತಿಯು ಅವರ ಶಿಷ್ಯತ್ವದ ನಾಮ ಫಲಕವಾಗಿತ್ತು (ವಚನಗಳು 9-17). ಆತನು ಅವರಿಗೆ ಜೀವದ ಹಾಗೂ ಪ್ರೀತಿಯ ಮೂಲವಾಗಿದ್ದನು. ತಂದೆ ಹಾಗೂ ಮಗನು ಪ್ರೀತಿಸಿದಂತೆ ಅವರುಗಳು ಪ್ರೀತಿ ಸಬೇಕಿತ್ತು - ಮುಂದೆ ಲೋಕದಿಂದ ಉಂಟಾಗುವ ದ್ವೇಷ ಮತ್ತು ಅಸೂಯೆಯ ಬಗ್ಗೆ ಆತನ ತಿಳಿಸಿದನು (ವಚನಗಳು 18-25). ಆತನ ನಿಮಿತ್ತವಾಗಿ ಉಂಟಾಗುವ ದ್ವೇಷ ವನ್ನು ಅವರು ಅನುಭವಿಸಬೇಕಿತ್ತು.

ಮೇಲುಪ್ಪರಿಗೆಯಲ್ಲಿ ಆತನು ಮಾತಾಡಿದ ಸಕಲ ಚರ್ಚೆಗಳು ಅವರಿಗೆ ಪ್ರಮುಖ ಅಂಶಗಳಾಗಿದ್ದವು. ಆತನು ಅವರನ್ನು ಸಾದುತ್ವದ, ತರಬೇತಿಯಿಂದ, ಅವರಿಗೆ ಮುಂದೆ ಉಂಟಾಗಬಹುದಾದ ವಿಷಯಗಳ ಮಾಹಿತಿಯನ್ನು ನೀಡಿ, ಅವರು ಕೆಟ್ಟ ಲೋಕವನ್ನು ಪರಲೋಕದ ನಿಮಿತ್ತವಾಗಿ ಎದುರಿಸಲು ಸಿದ್ಧಮಾಡಿದನು.

ಒಬ್ಬನು ಕ್ರಿಸ್ತನ ಶಿಷ್ಯನಾಗುವದಾದರೆ, ಅವನ ಸುತ್ತಲು ಇರುವವರೆಲ್ಲರೂ ಅವನಿಗೆ ಪ್ರೋತ್ಸಾಹ ನೀಡುವರು ಎಂದು ಒಂದು ವೇಳೆ ಭಾವಿಸಬಹುದು. ಏಕೆಂದರೆ, ಶಿಷ್ಯರಾಗುವದು ಮಹತ್ವದ ಸ್ಥಾನವಾಗಿರುವರಿಂದ ಮತ್ತು ಮಹಾ ಪ್ರತಿಫಲದ ಜೀವಿತವೆಂದು ತಿಳಿಯವಾಗ, ಇಂತಹ ವ್ಯಕ್ತಿಯು ತನ್ನ ಸುತ್ತಲಿರುವ ಲೋಕದಿಂದ ಘನವನ್ನು ಹೊಂದಬೇಕು ಎಂದು ಬಯಸುವದಿಲ್ಲವೇ? ಆದರೆ ಯೇಸು ತನ್ನ ಅಪೊಸ್ತಲರಿಗೆ ಎಚ್ಚರಿಸಿ: ನಂಬಿಗಸ್ತನಾದ ಶಿಷ್ಯನು ಸಹ, ಯೇಸುವಿನಂತೆ ಶಿಕ್ಷೆಯನ್ನು ಅನುಭವಿಸುವನು. ಅವನು ಅದಕ್ಕಾಗಿ ಸಿದ್ಧನಾಗಿರಬೇಕು ಅವನು ಲೋಕದ, ಶರೀರದ, ಹಾಗೂ ಸೈತಾನನ ದ್ವೇಷಕ್ಕೆ ಒಳಗಾಗುವನು.

## ಬಹಳ ಕಾಲ ಇರುವ ದ್ವೇಷ

*ಕ್ರಿಸ್ತನ ಶಿಷ್ಯರಿಗೆ ಎದುರಾದ ದ್ವೇಷವು, ಬಹಳ ಕಾಲದ ಹಿಂದೆ ಅದು ದೇವರಿಗೂ ಉಂಟಾಗಿತು.* ಸೈತಾನನು ದೇವರಿಗೆ ವಿರುದ್ಧವಾಗಿದ್ದನು ಎಂಬುದಕ್ಕೆ ಒಂದು ನಿತ್ಯವಾದ ಹಿನ್ನೆಲೆಯಿದೆ. ದೇವರ ಪರಿಪೂರ್ಣವಾದ ಚಿತ್ತವು ಅವನಿಗೆ ಮಾರಕವಾಯಿತು. ಅವನು ಅದನ್ನು ತಿರಸ್ಕರಿಸಿ, ದೇವರಿಗೆ ವಿರುದ್ಧವಾಗಿ ಅವನೊಂದಿಗೆ ಅನೇಕ ದೇವ ದೂತರನ್ನು ಕರಕೊಂಡನು, ಆದ್ದರಿಂದ ಈಗ ಅವರಿಗಾಗಿ ನಿತ್ಯವಾದ ಮೂಲವಾಗಿರುವನು (2 ಪೇತ್ರ 2:4). ಪಾಪದ ನಿಮಿತ್ತವಾಗಿ ದೇವದೂತರು ಹಾಗೂ ಮಾನವರು ಸತ್ಯ ಅಸತ್ಯಗಳ ವಿವೇಕ ವನ್ನು ಪಡೆದು, ಅವರು ವೃದ್ಧಿಗೊಳ್ಳುವಾಗ ನೈತಿಕ ನಿರ್ಧಾರವನ್ನು ಮಾಡಬಹುದಿತ್ತು.

ಸೈತಾನನು ದೇವರಿಗೆ ವಿರುದ್ಧವಾದಾಗ, ಅಲ್ಲಿ ಪಾಪದ ಇರುವಿಕೆ ಉಂಟಾಯಿತು. ಪಾಪವು ಸೈತಾನನಿಗಿಂತಲು ಕ್ರೂರವಾಗಿದೆ. ಸೈತಾನನು ಇರುವ ಪರಿಸ್ಥಿತಿಗೆ ಪಾಪವೇ ಕಾರಣವಾಯಿತು. ಪಾಪವು ಏದೆನ್ ತೋಟವನ್ನು ಪ್ರವೇಶಿಸುವ ಮೂಲಕ "ವಾಯು ಮಂಡಲದ ಅಧಿಕಾರಿಯಾದ" ಸೈತಾನನು, ನೀತಿಗೆ ವಿರುದ್ಧವಾಗಿ ಯುದ್ಧವನ್ನು ಪ್ರಪಂಚದಲ್ಲಿ ಆರಂಭಿಸಿದನು (ಎಫೆಸ 2:2). ಲೋಕದ ಕೆಲವು ಆಡಳಿತವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು, ಅದರಲ್ಲಿರುವ ಆಶಾಪಾಶಗಳನ್ನು, ಜನರನ್ನೂ ಕೆಲವು ಶಕ್ತಿಯನ್ನು ತನಗಾಗಿ ತೆಗೆದುಕೊಂಡನು.

ಯೇಸುವಿಗೆ ವಿರುದ್ಧವಾದವನು, ದೇವರಿಗೂ ವಿರುದ್ಧವಾದನು. ದೇವರ ನೀತಿ, ಸತ್ಯ, ಹಾಗೂ ಒಳ್ಳೇ ತನವನ್ನು ಸೈತಾನನು ಎಂದಿಗೂ ಒಪ್ಪಿಕೊಳ್ಳುವದಿಲ್ಲ ಹಾಗೂ ಅಂಗೀ ಕರಿಸುವದೂ ಇಲ್ಲ. ಪಾಪದ ಪರಿಣಾಮದಿಂದಾಗಿ ಹೃದಯವು ಉತ್ತಮವಾದ ಜೀವಿತವನ್ನು

ಒಪ್ಪಿಕೊಳ್ಳದೆ, ದುರಾಶೆಯ ದೆಸೆಯಿಂದ ಅದನ್ನು ದ್ವೇಷಿಸುತ್ತದೆ.

## ಅದು ಯೇಸುವನ್ನು ದ್ವೇಷಿಸುತ್ತದೆ

*ದೈವೀಕ ಒಳಿತಿಗೆ ವಿರುದ್ಧವಾದ ದ್ವೇಷವು, ಯೇಸುವಿನ ಸೇವಾ ಅವಧಿಯಲ್ಲಿ ಅತಿರೇಖಕ್ಕೆ ತಿರುಗಿತ್ತು.* ತಂದೆಗೆ ವಿರುದ್ಧವಾದ ದ್ವೇಷವು, ಯೇಸುವಿನ ಬಳಿಗೆ ಬಲದಿಂದ ಆಕ್ರಮಿಸಿತು ಏಕೆಂದರೆ, ಆತನು ತಂದೆಯೊಂದಿಗೆ ಒಂದಾಗಿದ್ದನು. ಲೋಕಕ್ಕೆ ಬೆಳಕನ್ನು ನೀಡುವದಕ್ಕಾಗಿ ತಂದೆಯು ಆತನನ್ನು ಕಳುಹಿಸಿದ್ದನು. ಯೇಸು ತನ್ನ ಇಹಲೋಕದ ಜೀವಿತದ ಅವಧಿಯಲ್ಲಿ ತಂದೆಯ ಚಿತ್ತದ ಮುಖಾಂತರ ಲೋಕವನ್ನು ಜಯಿಸಿದ್ದನು. ಆತನು ದೇವರ ಸ್ವಭಾವವನ್ನು ಪ್ರದರ್ಶಿಸಿಸಿ, ದೇವರಂತೆ ಜೀವಿಸಿ, ದೇವರ ನಿತ್ಯವಾದ ಯೋಜನೆಯನ್ನು ಪ್ರಕಟಿಸಿದಾಗ, ಹಿಂದೆಂದೂ ಇಲ್ಲದಂತ ದ್ವೇಷವನ್ನು ಸೈತಾನನು ಆತನಿಗೆ ವಿರುದ್ಧವಾಗಿ ಪ್ರಕಟಿಸಿದನು.

ಆದ್ದರಿಂದ ಮೇಲುಪ್ಪರಿಗೆಯ ಚರ್ಚೆಯಲ್ಲಿ ಸೈತಾನನನ್ನು ಜಯಿಸುವ ಹೃದಯವನ್ನು ಹೊಂದಬೇಕೆಂದು ತನ್ನ ಸೇವೆಯು ಉಂಟಾಯಿತು. ಆದ್ದರಿಂದ ಆತನು,

> ಮತ್ತಾರೂ ನಡಿಸದ ಕ್ರಿಯೆಗಳನ್ನು ನಾನು ಅವರಲ್ಲಿ ನಡಿಸದೆ ಇದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಈಗ ಅವರು ನೋಡಿದ್ದಾರೆ, ಆದರೂ ನನ್ನ ಮೇಲೆಯೂ ನನ್ನ ತಂದೆಯಮೇಲೆಯೂ ದ್ವೇಷ ಮಾಡಿದ್ದಾರೆ. ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿ ಸಿದರು ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು ನೆರವೇರುವಂತೆ ಹೀಗಾ ಯಿತು (15:24, 25) ಅಂದನು.

ಯೇಸು ಕ್ರಿಸ್ತನಲ್ಲಿದ್ದ ನೀತಿಯನ್ನು ನೋಡಿದಾಗ, ಲೋಕವು ಆತನಿಗೆ ವಿರುದ್ಧವಾಯಿತು,

ಆತನು ದೇವರಿಂದ ಬಂದ ಸತ್ಯವೆಂಬುದನ್ನು, ಆತನ ಕಾರ್ಯಗಳೇ ರುಜುವಾತು ಪಡಿಸಿದವು, ಆದ್ದರಿಂದ ಕೆಟ್ಟದ್ದನ್ನು ನಿರ್ನಾಮ ಮಾಡಬೇಕೆಂದು ಈ ಸತ್ಯವು ಸಾಬೀತು ಪಡಿಸಿತು. ಯೇಸು ಈ ಲೋಕಕ್ಕೆ ಬಂದ ನಿಮಿತ್ತವಾಗಿ, ಕೆಟ್ಟದ್ದರ ಮತ್ತು ಒಳ್ಳೇದರ, ಸತ್ಯ ಮತ್ತು ಅಸತ್ಯದ, ಪ್ರೀತಿ ಹಾಗೂ ದ್ವೇಷದ, ನಡುವೆ ವೈರತ್ವವುಂಟಾಯಿತು. ಯೇಸು ನೀಡಿದ ಸಹಜವಾದ ಸತ್ಯವನ್ನು ನಿರಾಕರಿಸುವದೇ ದೊಡ್ಡದಾದ ಹಾಗೂ ಸಹಜವಾದ ಪಾಪವಾಗಿದೆ. ಲೋಕವು ಸೈತಾನನ ಘಾಡವಾದ ಪಾಪದಲ್ಲಿ ಜೀವಿಸಿದರೆ, ಯೇಸು ಕ್ರಿಸ್ತನು ನಿರೀಕ್ಷೆಗಾಗಿ, ಹಿತಕ್ಕಾಗಿ ಮತ್ತು ಪ್ರೀತಿಗಾಗಿ ಬಲವಾದ ಶಕ್ತಿಯಿಂದ ಜೀವಿಸಿದನು. ಯೇಸುವಿನ ಬೆಳಕು ಲೋಕದಲ್ಲಿ ಪ್ರಕಾಶಿಸಿದಾಗ, ಸೈತಾನನ ಶಕ್ತಿಗಳು ಅದನ್ನು ಬದಲವಾಗಿ ನಿರಾಕರಿಸಿದವು. ಯಾಕೆಂದರೆ ಆ ಬೆಳಕು ಪಾಪದ ಸಂಬಳ ಮರಣ ಎನ್ನುವಾಗ, ಪಾಪದ ಲೋಕವು ಅದನ್ನು ದ್ವೇಷಿಸಿತು, ಬೆಳಕನ್ನು ತಿರಸ್ಕರಿಸಿತು, ಮತ್ತು ಅದನ್ನು ನಾಶಮಾಡಲು ತನ್ನ ಹಸ್ತವನ್ನು ಮೇಲಕ್ಕೆತ್ತಿತು. ಈ ವಿಚಿತ್ರವಾದ ಕೆಟ್ಟತನವು "ಯೇಸುವಿಗೆ ವಿರುದ್ಧವಾಗಿ ಮರಣದ ತನಕ ಯುದ್ಧಮಾಡಿತು." ಆತನ ಪರಿಪೂರ್ಣವಾದ ಜೀವಿತವು ಒಂದು ಬಲವಾದ ನಿರ್ಧಾರವನ್ನು ಮಾಡಿತು. ಈ ಯುದ್ಧ ಭೂಮಿಯಲ್ಲಿ ಯಾರೂ ಸಹ ತಟಸ್ಥ ಸ್ಥಿತಿಯಲ್ಲಿ ಇರಬಾರದಿತ್ತು. ಆತನನ್ನು ಪ್ರೀತಿಸಬೇಕು ಅಥವಾ ದ್ವೇಷಿಸಬೇಕು, ಸೇವೆಮಾಡಬೇಕು. ಅಥವಾ ಆತನನ್ನು ಶಿಲುಬೆಗೆ ಹಾಕಬೇಕಿತ್ತು, ಆರಾಧಿಸಬೇಕು ಅಥವಾ ಸೈತಾನನಿಗೆ ಒಳಗಾಗಬೇಕಿತ್ತು.

ಲೋಕವು ಆತನ ಕಾರ್ಯವನ್ನು ನೋಡಿದಾಗ, ನಿಜವಾದ ಹೋರಾಟವು ಆರಂಭವಾಯಿತು. ಆತನ ಕೆಲಸವನ್ನು ಒಪ್ಪಬೇಕಿತ್ತು ಅಥವಾ ನಿರಾಕರಿಸಬೇಕಿತ್ತು. ವಿರೋಧವೇ ಕೆಟ್ಟತನದ ಆಯ್ಕೆಯಾಯಿತು. ಕತ್ತಲ ಪ್ರಪಂಚವು ಯೇಸು ಮಾಡಿದ ಕಾರ್ಯಗಳನ್ನು ಗಮನಿಸಿತು ಆಗ ಅದನ್ನು ನಾಶಮಾಡಲು ಮುಂದಾಯಿತು. "ಕಾರಣವಿಲ್ಲದೆ ಅವರು ನನ್ನನ್ನು ದ್ವೇಷಿಸಿದರು" ಎಂದು ಯೇಸು ಹೇಳಿದನು. ಆತನು ಸತ್ಯ, ಜೀವ ಮತ್ತು ಪ್ರೀತಿಯೇ ಆಗಿದ್ದನು, ಆತನಲ್ಲಿ ಯಾವದೇ ಕಾರಣಗಳಿರಲಿಲ್ಲ. ಬೆಳಕನ್ನು ನಿರಾಕರಿಸಿ,

ಕೆಟ್ಟದ್ದನ್ನು ಆಯ್ದುಕೊಳ್ಳುವ ಸಲುವಾಗಿ, ಆತನ ಮೇಲೆ ದ್ವೇಷ ಉಂಟಾಯಿತು. ಯೇಸುವಿನ ಕುರಿತಾಗಿ ಈ ವಿಚಾರವು ಇದ್ದಂತೆ, ದುಷ್ಟ ಶಕ್ತಿಯಿಂದ ಆಳುವ ಈ ಪ್ರಪಂಚವು ಇದನ್ನೇ ಮುಂದುವರೆಸಿದೆ.

## ಯೇಸುವಿನ ಶಿಷ್ಯರ ವಿರುದ್ಧವಾದ ದ್ವೇಷ

*ಯೇಸುವಿನ ಶಿಷ್ಯರು ಯೇಸುವಿನವರಾಗಿದ್ದರಿಂದ, ಆತನು ಅನುಭವಿಸಿದಂಥ ದ್ವೇಷಗಳನ್ನು ಅನುಭವಿಸಬೇಕಾಯಿತು.* ತಂದೆಯಲ್ಲಿದ್ದ ಸತ್ಯವು ಯೇಸುವಿನಲ್ಲೂ ಇತ್ತು. ಯಜಮಾನನಾದ ಯೇಸುವಿನಲ್ಲಿದ್ದ ಸತ್ಯವು, ಶಿಷ್ಯರಲ್ಲಿತ್ತು. ಯೇಸುವನ್ನು ಕ್ರೂಜೆಗೆ ಹಾಕಿದ ದ್ವೇಷವು, ಅನೇಕ ಸಮಯಗಳಲ್ಲಿ ಯೇಸುವಿನ ಶಿಷ್ಯರಲ್ಲೂ ಮುಂದುವರೆದಿತ್ತು. ಯೇಸು ಈ ಲೋಕದಲ್ಲಿ ಅನುಭವಿಸಿದಂತೆ, ಆತನ ಶಿಷ್ಯರು ಸಹ ಅನುಭವಿಸಬೇಕಾಯಿತು.

> ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯ ವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿ ರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದಳಗಿಂದ ಆರಿಸಿ ತೆಗೆದುಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. ದಣಿಗಿಂತ ಆಳು ದೊಡ್ಡವನಲ್ಲವೆಂಬದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಕೈಕೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು. ಆದರೆ ಅವರು ನನ್ನನ್ನು ಕಳುಹಿಸಿಕೊಟ್ಟಾತನನ್ನು ತಿಳಿಯದವರಾದದರಿಂದ ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತ ನಿಮಗೆ ಮಾಡುವರು (15:18-21).

ಲೋಕವು ಅವರನ್ನು ದ್ವೇಷಿಸಿದರೆ, ಶಿಷ್ಯರು ಆಶ್ಚರ್ಯ ಪಡಬೇಕಾಗಿರಲಿಲ್ಲ ಆದರೆ ಆ ದ್ವೇಷಕ್ಕೆ ಕಾರಣವನ್ನು ತಿಳಿಯಬೇಕಿತ್ತಷ್ಟೆ. ಇಂತಹ, ವಿರೋಧಗಳನ್ನು ಎದುರಿಸುವಾಗ, ನಾವು ಕ್ರಿಸ್ತನವರಾದ್ದರಿಂದ ಇದು ಸಂಭವಿಸಿತು ಎಂದು ತಿಳಿಯಬೇಕು. ವಿರೋಧಿಗಳು ತಂದೆಯನ್ನು ಅರಿಯದವರು ಮತ್ತು ಆತನು ಈ ಲೋಕದಲ್ಲಿ ನಡೆಸುತ್ತಿರುವ ಕಾರ್ಯವನ್ನು ಅರಿಯದವರು ಅದಕ್ಕಾಗಿ ದ್ವೇಷ ಮಾಡುತ್ತಾರೆ ಎಂದು ತಿಳಿಯಬೇಕು. ಒಂದು ವೇಳೆ ಯೇಸುವಿನ ಅಪೊಸ್ತಲರು ಲೋಕದಲ್ಲಿ ಪಾಲುದಾರರಾಗಿದ್ದರೆ, ಅದು ಅವರನ್ನು ದ್ವೇಷಿಸುತ್ತಿರಲಿಲ್ಲ, ಲೋಕವು ತನ್ನವರನ್ನು ದ್ವೇಷಿಸುವದಿಲ್ಲ. ಏಕೆ ಹೀಗಾಯಿತು? (ನೋಡಿರಿ 15:19). ಯೇಸು ಅಪೊಸ್ತಲರನ್ನು ಲೋಕದಿಂದ ಆದುಕೊಂಡು, ಅವರಿಗೆ ಸತ್ಯವನ್ನು, ಜೀವವನ್ನು ಪಾಪಿಗಳಿಗೆ ನೀಡಿ, ಇದರ ಮೂಲಕ ಲೋಕವನ್ನು ಖಂಡಿಸುವಂತೆ ಅವರನ್ನು ಕಳುಹಿಸಿದನು, ಆದ್ದರಿಂದ ಲೋಕವು ಅಪೊಸ್ತಲರಿಗೆ ವಿರೋಧವಾಗಿ ಹೋರಾಟ ಮಾಡಿತು. ಯೇಸುವಿನ ಹಾಗೆ ಆತನ ಅನುಯಾಯಿಗಳು ಸಹ ತಕ್ಕ ಮಟ್ಟದ ಹಿಂಸೆಯನ್ನು ಅನುಭವಿಸುತ್ತಾರೆ. "ನನ್ನನ್ನು ಹಿಂಸೆ ಪಡಿಸಿದವರು ನಿಮ್ಮನ್ನು ಹಿಂಸಿಸುವರು" (15:20).

ಯೇಸುವಿನ ಅನುಯಾಯಿಗಳು ಸಾರಿದ ಸಂದೇಶವನ್ನು ಲೋಕದಲ್ಲಿ ಯಾರಾದರು ಆಲಿಸಿದರೆ? ಹೌದು ಅವರಲ್ಲಿ ಕೆಲವರಿದ್ದಾರೆ ಕರ್ತನು ತಿಳಿಸಿ, "ಅವರು ನನ್ನ ಮಾತನ್ನು ಕೇಳುವದಾದರೆ, ನಿಮ್ಮ ಮಾತನ್ನು ಕೇಳುವರು." ಯೇಸುವನ್ನು ಅಂಗೀಕರಿಸಿದಂತೆ, ಕೆಲವರು ಅಪೊಸ್ತಲರ ಉಪದೇಶವನ್ನು ಕೇಳುವರು. ಈ ದಿನಗಳಲ್ಲಿ ವಾಕ್ಯವನ್ನು ಸಾರುವಾಗ ಕೆಲವರು ಪ್ರತಿಕ್ರಿಯಿಸುವರು. ಹಾಗೂ ದುಷ್ಟತನದಲ್ಲಿ ಇರುವ ಪ್ರಪಂಚವು ದುರಾಶೆಯುಳ್ಳ ಲೋಕವು

ಅದನ್ನು ಸ್ವೀಕರಿಸಲಾರದು, ಅಥವಾ ಪರಿವರ್ತನೆಗೊಳ್ಳದು, ಅದು ತನ್ನನ್ನು ತಾನೇ ಪ್ರತಿಪಾದಿಸಿಕೊಳ್ಳುತ್ತದೆ, ಬೆಳಕನ್ನು ಅರಿಯಲಾರದು.

## ಮುಕ್ತಾಯ

ಶಿಷ್ಯರು ಲೋಕದಿಂದ ರಕ್ಷಿಸಲ್ಪಟ್ಟವರಾಗಿ, ಅದೇ ಲೋಕವನ್ನು ರಕ್ಷಿಸುವದಕ್ಕಾಗಿ ಕಳುಹಿಸಲ್ಪಟ್ಟರು. ಯೇಸು ತನ್ನ ಶಿಷ್ಯರನ್ನು ಕಳುಹಿಸಿದ್ದರಿಂದ ನಾವುಗಳು ಸಹ ಹೊರಟು ಹೋಗಬೇಕು. ನಾವು ಪ್ರೀತಿಯಿಂದ ಹೋದರೂ, ಲೋಕವು ನಮ್ಮನ್ನು ದ್ವೇಷಿಸಬಹುದು. ಕೆಲವರು ಸತ್ಯದ ದಾರಿಗೆ ಬಂದರೆ, ಕೆಲವರು ನಿರ್ಲಕ್ಷಿಸಬಹುದು, ಇನ್ನೂ ಕೆಲವರು ದ್ವೇಷಿಸಿ ವಿರೋಧಿಸಬಹುದು, ದ್ವೇಷಕ್ಕೆ ಒಳಗಾಗಲು ಯಾವ ಶಿಷ್ಯನೂ ಇಚ್ಛಿಸುವದಿಲ್ಲ, ಯಾಕೆಂದರೆ ರಕ್ಷಣೆಯ ಸಂದೇಶವಾದ ಸುವಾರ್ತೆಯನ್ನು ದ್ವೇಷದ ನಡುವೆ ಸಾರಲೇಬೇಕು.

---

*"ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ; ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ; ಆದಕಾರಣ ಲೋಕವು ಇವರ ಮೇಲೆ ದ್ವೇಷ ಮಾಡಿ ಅದೆ. ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗ ಬೇಕೆಂದು ನಾನು ಕೇಳಿ ಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕ ದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು. ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿ ಕೊಟ್ಟೆನು. ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆ ಪಡಿಸಿಕೊಳ್ಳುತ್ತೇನೆ" (ಯೋಹಾನ 17:14-19).*

*"ಲೋಕವು ತನ್ನದೇ ಆದ ಧರ್ಮವನ್ನು, ದೇವರನ್ನು ಹೊಂದಿದೆ, ಇದನ್ನು ಕಾಯೀ ನನು ಏದೇನ್ ತೋಟದ ಬಾಗಿಲಿನಲ್ಲಿ ಸ್ಥಾಪಿಸಿದನು; ಅದರ ನಾಯಕನನ್ನು ಅದರ ನ್ಯಾಯಾಲಯವನ್ನು ಮತ್ತು ನಿಯಮಾವಳಿಗಳನ್ನು ಬರವಣಿಗೆಯನ್ನು ಹಾಗೂ ಅದರಲ್ಲಿ ದೊರೆಯುವ ಆನಂದವನ್ನು ಹುಟ್ಟುಹಾಕಿದನು. ಅದನ್ನು ಒಂದು ವಿಚಿತ್ರವಾದ ಶಕ್ತಿಯು ಆವರಿಸಿಕೊಂಡಿತ್ತು. ಅದನ್ನು ಅಪೊಸ್ತಲನು" (1 ಯೋಹಾನ 2:15, 16) ಲೋಕದಾಶೆ ರೋಗ, ಪ್ರಭಾವ, ಆಡಂಬರ, ದುಷ್ಟತ್ವ ಎಂದು ವಿವರಿಸಿದನು. ಕಲ್ಲಿನಿಂದ ತುಂಬಿದ್ದ ಒಂದು ಪರ್ವತವು ಕೆಲವು ಕಬ್ಬಿಣದ ಪಾತ್ರೆಗಳನ್ನು ತನ್ನಲ್ಲಿಗೆ ಸೆಳೆದುಕೊಂಡಾಗ ಅದು ಅಸಹಾಯಕ ವಾಗಿ, ಆಕಾರವಿಲ್ಲದ ಪರಿಸ್ಥಿತಿಯಲ್ಲಿ ಗಾಳಿಯೊಳಗೆ ಸೇರಿಕೊಂಡಿತು. ಪ್ರಪಂಚದ ಪೂಜಕರು ತಾತ್ಕಾಲಿಕವಾದ ವಸ್ತುಗಳಿಗೆ ಅಂಟಿಕೊಂಡರು. ಅವರಲ್ಲಿ ಘೋರವಾದ ಬಡತನ, ಬಾಧೆ, ಹಾಗೂ ಅವಮಾನ, ಉಂಟಾಯಿತು. ಅಂಥವರು ಉತ್ತಮವಾದ ಗೌರವ, ಆನಂದ, ಸಂತೋಷವನ್ನು ನಿರಾಕರಿಸುವವರಾಗಿದ್ದಾರೆ."*[1]

---

ಟಿಪ್ಪಣಿ

[1] F. B. Meyer, *Gospel of John* (Grand Rapids, Mich.: Zondervan Publishing House, 1950), 275-76.